# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 30 ಫ್ರಾ.ಸಾ. : 34**

ಸಾಕ್ಷಿಯ ಹೆಸರು : ವಿಶ್ವನಾಥ ಇಲ್ಲನ್ ಗುಡಿ
ತಂದೆಯ ಹೆಸರು : ಇಲ್ಲನ್ ಗುಡಿ
ವಯಸ್ಸು : 43 ವರ್ಷ
ಕೆಲಸ : ಕೂಲಿ ಕೆಲಸ
ವಾಸ : ರಾಜೀವ ನಗರ, ಕದ್ರಾ, ಕಾರವಾರ

**ದಿನಾಂಕಃ 04-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-29 ಭಾಗ್ಯಲಕ್ಷ್ಮಿ ನನ್ನ ಹೆಂಡತಿ. ನಾವು ಕದ್ರಾದ ರಾಜೀವ ನಗರದಲ್ಲಿ ವಾಸವಾಗಿರುತ್ತೇವೆ. ಮೃತ ವೇಲು ನನ್ನ ಅಣ್ಣ, ಜಾನಕಿ ಮೃತ ವೇಲು ರವರ ಹೆಂಡತಿ ಅಂದರೆ ನನ್ನ ಅತ್ತಿಗೆ, ಅವರಿಗೆ ಎರಡು ಜನ ಮಕ್ಕಳು ಅಂದರೆ ಮೃತೆ ಅಶ್ವಿನಿ ಹಾಗೂ ಮೃತ ಸತ್ಯ ನಾರಾಯಣ ಮೂರ್ತಿ, ಅವರೂ ಸಹ ನಮ್ಮ ಮನೆಯಿಂದ ಸುಮಾರು 300 ಮೀಟರ್ ದೂರದಲ್ಲಿ ವಾಸವಾಗಿದ್ದರು. ವೇಲು ರವರ ಮನೆಯು ಸಿಮೆಂಟ್ ಸೀಟಿನ ಮನೆಯಾಗಿದ್ದು, ಮನೆಯ ನೆಲವು ಸಿಮೆಂಟ್ ನೆಲವಾಗಿರುತ್ತದೆ, ಅದೇ ರೀತಿ ಅವರ ಮನೆಗೆ ವಿದ್ಯುತ್ ದೀಪದ ಬೆಳಕಿನ ವ್ಯವಸ್ಥೆ ಇತ್ತು. ಅವರ ಮನೆಯಲ್ಲಿ ಒಟ್ಟು ನಾಲ್ಕು ಕೋಣೆಗಳಿದ್ದವು. ವೇಲು ರವರು ತನ್ನ ಮನೆಗೆ ಹೊಂದಿಕೊಂಡಂತೆ ಪಂಚರ್ ಅಂಗಡಿಯನ್ನು ಇಟ್ಟುಕೊಂಡಿದ್ದರು. ಅವರ ಮನೆಯ ಮುಂದುಗಡೆ ಸಹ ಬೀದಿ ದೀಪದ ಬೆಳಕು ಇರುತ್ತದೆ. ವೇಲು ರವರಿಗೆ ಒಂದು ಕಾಲು ಮಾತ್ರ ಇದ್ದು, ಅವರು ಎರಡು ಊರುಗೋಲುಗಳ ಸಹಾಯದಿಂದ ನಡೆಯುತ್ತಿದ್ದರು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು, ಆತ ನನ್ನ ಅಣ್ಣನ ಅಂಗಡಿಗೆ ಬರುತ್ತಿದ್ದ. ಆತನನ್ನು ಊರಿನಲ್ಲಿ ಎಲ್ಲರೂ ಗಿರಿ ಎಂದು ಕರೆಯುತ್ತಾರೆ.

2. ದಿಃ 13-02-2014 ರಂದು ನಾನು ಕೆಲಸಕ್ಕಾಗಿ ಬೆಂಗಳೂರಿನಲ್ಲಿದ್ದ ನನ್ನ ಅಳಿಯ ಈಶ್ವರನ ಹತ್ತಿರ ಹೋಗಿದ್ದೆ. ದಿಃ 14-02-2014 ರಂದು ರಾತ್ರಿ 11-30 ಗಂಟೆಗೆ ನಾನು

ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾಗ, ನನ್ನ ಅಳಿಯ ಈಶ್ವರ, ನಾನು ಕೆಲಸ ಮಾಡುತ್ತಿದ್ದಲ್ಲಿಗೆ ಬಂದು, "ನನ್ನ ಅಕ್ಕ ಭಾಗ್ಯಲಕ್ಷ್ಮಿ ನಿಮ್ಮ ನಂಬರ್ ಗೆ ಕರೆ ಮಾಡಿದ್ದು, ನಿಮ್ಮ ಫೋನ್ ತಾಗಿರುವುದಿಲ್ಲ, ಆದ್ದರಿಂದ ನನಗೆ ಕರೆ ಮಾಡಿ, ನಿಮ್ಮ ಅತ್ತಿಗೆ ಜಾನಕಿಗೆ ಯಾರೋ ಕತ್ತಿಯಿಂದ ಕಡಿದು ಕೈ ತುಂಡಾಗಿರುತ್ತದೆ ಹಾಗೂ ನಿಮ್ಮ ಅಣ್ಣನ ಮಗಳಾದ ಅಶ್ವಿನಿಗೆ ಕುತ್ತಿಗೆಯ ಬಳಿ ಕತ್ತಿಯಿಂದ ಕಡಿದು, ಕೊಲೆ ಮಾಡಿರುತ್ತಾರೆ ಹಾಗೂ ಮನೆಯಲ್ಲಿ ವೇಲು ಹಾಗೂ ಸತ್ಯ ನಾರಾಯಣ ಮೂರ್ತಿ ಕಾಣುತ್ತಿಲ್ಲ ಎಂದು ತಿಳಿಸಿರುತ್ತಾಳೆ" ಎಂದು ಹೇಳಿದನು.

3. ವಿಷಯ ತಿಳಿದ ಆ ಕೂಡಲೇ ನಾನು ಬೆಂಗಳೂರಿನಿಂದ ಬಸ್ ನ್ನು ಹತ್ತಿ, ಕಾರವಾರಕ್ಕೆ ಹೊರಟಿದ್ದು, ನಾನು ದಾರಿಯಲ್ಲಿರುವಾಗ ರಾತ್ರಿ 01-30 ಗಂಟೆ ಸುಮಾರಿಗೆ ನನ್ನ ಹೆಂಡತಿ ನನಗೆ ಕರೆ ಮಾಡಿ, ಕೊಡಸಳ್ಳಿಗೆ ಹೋಗುವ ಅರಣ್ಯದ ಕಾಲು ದಾರಿಯಲ್ಲಿ ನಿಮ್ಮ ಅಣ್ಣನಾದ ವೇಲು ಹಾಗೂ ಆತನ ಮಗ ಸತ್ಯ ನಾರಾಯಣ ಮೂರ್ತಿಯನ್ನು ಕತ್ತಿಯಿಂದ ಕಡಿದು ಕೊಲೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾಳೆ. ಮರುದಿನ ಅಂದರೆ ದಿಃ15-02-2014 ರಂದು ಬೆಳಿಗ್ಗೆ ನಾನು ಕಾರವಾರಕ್ಕೆ ಬಂದು, ನನ್ನ ಹೆಂಡತಿಗೆ ಕರೆ ಮಾಡಿದಾಗ, ಆಕೆಯು ಶವಗಳನ್ನು ಜಿಲ್ಲಾ ಸರಕಾರಿ ಆಸ್ಪತ್ರೆಯ ಶವಗಾರಕ್ಕೆ ತರುತ್ತಿದ್ದಾರೆ ಎಂದು ಹೇಳಿದ ಮೇರೆಗೆ, ನಾನು ನೇರವಾಗಿ ಜಿಲ್ಲಾ ಸರಕಾರಿ ಆಸ್ಪತ್ರೆಯ ಶವಗಾರದ ಬಳಿ ಹೋಗಿರುತ್ತೇನೆ.

4. ಆ ನಂತರ ಪೊಲೀಸರು ನನ್ನ ಅಣ್ಣ ವೇಲು, ಅವರ ಮಕ್ಕಳಾದ ಅಶ್ವಿನಿ ಹಾಗೂ ಸತ್ಯ ನಾರಾಯಣ ಮೂರ್ತಿ ರವರ ಶವಗಳನ್ನು ಜಿಲ್ಲಾ ಸರಕಾರಿ ಆಸ್ಪತ್ರೆಯ ಶವಗಾರದ ಬಳಿ ತಂದಿದ್ದು, ಅಲ್ಲಿ ನಾನು ಶವಗಳನ್ನು ನೋಡಿದಾಗ, ಸತ್ಯ ನಾರಾಯಣ ಮೂರ್ತಿಯ ಕುತ್ತಿಗೆಗೆ ಕತ್ತಿಯಿಂದ ಕಡಿದ ಗಾಯವಾಗಿ ರಕ್ತ ಬಂದಿತ್ತು, ಅಶ್ವಿನಿಯ ಎಡಗೈ ತುಂಡಾಗಿ ನೇತಾಡುತ್ತಿದ್ದು ಹಾಗೂ ಎಡ ಕುತ್ತಿಗೆಯ ಬಳಿ ಕತ್ತಿಯಿಂದ ಕಡಿದ ಗಾಯವಾಗಿ ರಕ್ತ ಬಂದಿತ್ತು ಹಾಗೂ ನನ್ನ ಅಣ್ಣ ವೇಲುವಿನ ಕುತ್ತಿಗೆ, ಹಣೆಯ ಮೇಲೆ ಮತ್ತು ಕೈಗಳಿಗೆ ಕತ್ತಿಯಿಂದ ಕಡಿದ ಗಾಯವಾಗಿ ರಕ್ತ ಬಂದಿತ್ತು.

5. ಆ ನಂತರ ವಿಷಯ ತಿಳಿಯಲಾಗಿ, ನನ್ನ ಅತ್ತಿಗೆಯಾದ ಜಾನಕಿಯ ಎಡಗೈ ಮುಂಗೈಯನ್ನು ಕತ್ತಿಯಿಂದ ಕಡಿದು ತುಂಡಾಗಿತ್ತು ಹಾಗೂ ಹಣೆಯ ಮೇಲೆಸಹ ಕತ್ತಿಯಿಂದ ಕಡಿದ ಗಾಯವಾಗಿ ರಕ್ತ ಬಂದಿದ್ದು, ಆಕೆಯನ್ನು ಮೊದಲಿಗೆ ಕೆ.ಪಿ.ಸಿ ಆಸ್ಪತ್ರೆಗೆ ಸೇರಿಸಿದ್ದು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕಾರವಾರಕ್ಕೆ ತಂದು, ಆ ನಂತರ ಪುನಃ ಗೋವಾದ ಬಾಂಬೋಲಿಯಂ

ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ತಿಳಿದು ಬಂತು. ಆಸ್ಪತ್ರೆಯ ಶವಗಾರದಲ್ಲಿ ಪೊಲೀಸರು ಮೂರೂ ಶವಗಳ ಪಂಚನಾಮೆಯನ್ನು ಮಾಡಿದರು. ಆ ನಂತರ ಸದರಿ ಮೂರೂ ಶವಗಳ ಮರಣೋತ್ತರ ಪರೀಕ್ಷೆ ನಡೆಸಿರುತ್ತಾರೆ. ಆ ನಂತರ ನಾನು ಹಾಗೂ ನನ್ನ ಚಿಕ್ಕಪ್ಪನಾದ ಚಾಸಾ-8 ಭೀಮ ರವರು ಸೇರಿ ಶವಗಳನ್ನು ನಮ್ಮ ಸುಪರ್ದಿಗೆ ಪಡೆದುಕೊಂಡು, ನಂತರ ರಾಜೀವ ನಗರಕ್ಕೆ ತೆಗೆದುಕೊಂಡು ಹೋಗಿ, ಶವ ಸಂಸ್ಕಾರ ಮಾಡಿರುತ್ತೇವೆ. ಶವ ಸ್ವೀಕರಿಸಿದ ಬಗ್ಗೆ ಶವ ಸ್ವಿಕೃತಿ ರಶೀದಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-64, 66 ಮತ್ತು 69 ಎಂದು ಗುರುತಿಸಲಾಗಿರುತ್ತದೆ.

6. ನಂತರ ನಾನು ವೇಲು ಹಾಗೂ ಸತ್ಯ ನಾರಾಯಣ ಮೂರ್ತಿ ರವರ ಶವ ಬಿದ್ದ ಸ್ಥಳಕ್ಕೆ ಹೋಗಿ ನೋಡಲಾಗಿ, ಸ್ಥಳದಲ್ಲಿ ರಕ್ತದ ಕಲೆಯಾಗಿದ್ದು, ಸದರಿ ಸ್ಥಳವು ಮಣ್ಣಿನ ಕಾಲು ದಾರಿಯಾಗಿತ್ತು. ಆ ನಂತರ ನಾನು ಅಶ್ವಿನಿಯ ಕೊಲೆಯಾದ ಹಾಗೂ ನನ್ನ ಅತ್ತಿಗೆ ಮೇಲೆ ಹಲ್ಲೆಯಾದ ಸ್ಥಳವಾದ ನನ್ನ ಅಣ್ಣ ವೇಲು ರವರ ಮನೆಗೆ ಹೋಗಿ ನೋಡಿದಾಗ, ಅಲ್ಲಿಯೂ ಸಹ ರಕ್ತದ ಕಲೆಗಳು ಇದ್ದವು. ನಾನು ನನ್ನ ಅಣ್ಣ ವೇಲು ಹಾಗೂ ಆತನ ಮಕ್ಕಳಾದ ಅಶ್ವಿನಿ, ಸತ್ಯ ನಾರಾಯಣ ಮೂರ್ತಿಶವಗಳನ್ನು ನೋಡಿದಾಗ ಕತ್ತಿಯಿಂದ ಕಡಿದು ಕೊಲೆ ಮಾಡಲಾಗಿದೆ ಎಂದು ನನಗೆ ಕಂಡುಬಂತು, ಅದೇ ರೀತಿ ಜಾನಕಿಯನ್ನು ಸಹ ಕತ್ತಿಯಿಂದ ಕಡಿದು, ಮಾರಣಾಂತಿಕ ಹಲ್ಲೆ ಮಾಡಿದ್ದಾರೆ ಎಂದು ಸಹ ನನಗೆ ಕಂಡುಬಂತು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

7. ದಿಃ 18-02-2014 ರಂದು ಬೆಳಿಗ್ಗೆ ನಾನು ಮನೆಯಲ್ಲಿದ್ದಾಗ, ವೇಲು ಹಾಗೂ ಆತನ ಮಕ್ಕಳನ್ನು ಕೊಲೆ ಮಾಡಿದ ಆರೋಪಿಯನ್ನು ಹಿಡಿದಿರುತ್ತಾರೆ ಎಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿದ್ದರು. ವಿಷಯ ತಿಳಿದ ನಂತರ ನಾನು ಹಾಗೂ ನನ್ನ ಹೆಂಡತಿ ಮತ್ತು ರಾಜೀವ ನಗರದ ಜನರೆಲ್ಲಾ ಸೇರಿ ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಅಲ್ಲಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ತೋರಿಸಿ, ಈತನೇ ವೇಲು ಹಾಗೂ ಆತನ ಮಕ್ಕಳನ್ನು ಕೊಲೆ ಮಾಡಿದ ಹಾಗೂ ಆತನ ಹೆಂಡತಿಯಾದ ಜಾನಕಿಯ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ ವ್ಯಕ್ತಿಯಾಗಿರುತ್ತಾನೆ ಎಂದು ತೋರಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

8. ಆ ನಂತರ ಪೊಲೀಸ್ ಠಾಣೆಯಲ್ಲಿ "ಆರೋಪಿಯು ಮೃತ ವೇಲು ರವರ ಮನೆಯಿಂದ ರೂ.45,000/- ಹಣವನ್ನು ಕಳುವು ಮಾಡಿದ್ದು, ಅದರಲ್ಲಿ ರೂ.37,000/- ಹಣವನ್ನು ಆರೋಪಿಯು ಪುನಃ ಮೃತ ವೇಲು ರವರ ಮನೆಯ ಒಳಗೆ ತಂದು ಇಡುವಾಗ, ವೇಲು ಅದನ್ನು ನೋಡಿ, ಆರೋಪಿಗೆ ಉಳಿದ ಹಣವನ್ನು ತಂದು ಕೊಡು, ಇಲ್ಲವಾದರೆ ನಿನ್ನ ವಿರುದ್ಧ ಪೊಲೀಸ್ ಠಾಣೆಗೆ ದೂರನ್ನು ನೀಡುತ್ತೇನೆ ಎಂದು ಹೇಳಿದ್ದರಿಂದ, ಆರೋಪಿಯು ಹೆದರಿ ವೇಲುವನ್ನು ಕೊಲೆ ಮಾಡುವ ಉದ್ದೇಶದಿಂದ, ದಿಃ 14-02-2014 ರಂದು ವೇಲು ರವರಿಗೆ ಹಣ ಕೊಡುತ್ತೇನೆಂದು ಅವರ ಮನೆಯ ಹತ್ತಿರ ಇರುವ ಕಾಡಿನ ಬಳಿ ಕರೆದಿದ್ದು, ಆಗ ಆತ ತನ್ನ ಮಗನೊಂದಿಗೆ ಆರೋಪಿ ಹೇಳಿದ ಸ್ಥಳಕ್ಕೆ ಹೋದಾಗ, ಆರೋಪಿಯು ಕತ್ತಿಯಿಂದ ವೇಲುವಿಗೆ ಕಡಿದು, ಕೊಲೆ ಮಾಡಿದ್ದು, ಆಗ ಅದನ್ನು ನೋಡಿದ ಆತನ ಮಗ ಸತ್ಯ ನಾರಾಯಣ ಮನೆಯ ಕಡೆಗೆ ಓಡಿ ಬರುತ್ತಿರುವಾಗ, ಆರೋಪಿಯು ಆತನಿಗೂ ಸಹ ಕತ್ತಿಯಿಂದ ಕಡಿದು, ಕೊಲೆ ಮಾಡಿರುತ್ತಾನೆ, ಆ ನಂತರ ಆರೋಪಿಯು ವೇಲುವಿನ ಮನೆಗೆ ಬಂದು, ಅಲ್ಲಿಯೂ ಸಹ ಆತನ ಮಗಳಾದ ಅಶ್ವಿನಿಯನ್ನು ಕತ್ತಿಯಿಂದ ಕಡಿದು, ಕೊಲೆ ಮಾಡಿರುತ್ತಾನೆ ಹಾಗೂ ಆತನ ಹೆಂಡತಿಯಾದ ಜಾನಕಿಯ ಮೇಲೆ ಕತ್ತಿಯಿಂದ ಮಾರಣಾಂತಿಕ ಹಲ್ಲೆ ಮಾಡಿರುತ್ತಾನೆ" ಎಂದು ತಿಳಿದು ಬಂತು. ಈ ಬಗ್ಗೆ ನಾನು ಪೊಲೀಸರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು-13 ಊರುಗೋಲುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

9. ವೇಲು ರವರಿಗೆ ಟೈಯರ್ ಪಂಚರ್ ಅಂಗಡಿಯಿಂದ ಹೆಚ್ಚಿನ ಆದಾಯ ಇಲ್ಲದ ಕಾರಣ, ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ ಎಂದರೆ ಸಾಕ್ಷಿಯು ಅವರ ಅನುಕೂಲಕ್ಕೆ ತಕ್ಕಂತೆ ಇದ್ದರು ಎಂದು ಹೇಳುತ್ತಾರೆ. ನಾನು ಕೂಲಿ ಕೆಲಸ ಮಾಡುವನಾಗಿದ್ದು, ಬೆಳಿಗ್ಗೆ ಕೂಲೆ ಕೆಲಸಕ್ಕೆ ಹೋದರೆ ಸಂಜೆಯೇ ಬರುತ್ತೇನೆ ಎಂದರೆ ಸರಿ. ಅದೇ ರೀತಿ ನಾನು ಕೂಲಿ ಕೆಲಸಕ್ಕೆ ಬೇರೆ ಊರಿಗೂ ಸಹ ಹೋಗುತ್ತೇನೆ ಎಂದರೆ ಸರಿ. ಆದ್ದರಿಂದ ನಾನು ವೇಲು ರವರ ಮನೆಗೆ ಯಾರು ಬಂದು-ಹೋಗುತ್ತಿದ್ದರು ಎಂದು ನೋಡಿಲ್ಲ ಎಂದರೆ ಸಾಕ್ಷಿಯು ಬೆಳಿಗಿನ ಸಮಯದಲ್ಲಿ ನೋಡಿಲ್ಲ, ಆದರೆ ನಾನು ಸಂಜೆ ವೇಳೆ ಮನೆಗೆ ಬಂದಾಗ ಯಾರು ಬಂದು-ಹೋಗುತ್ತಿದ್ದರು ಎಂದು ನೋಡಿರುತ್ತೇನೆ ಎಂದು ನುಡಿಯುತ್ತಾರೆ.

10. ಪಂಚರ್ ಅಂಗಡಿಗೆ ಊರಿನ ಜನರು ಬಂದು ಹೋಗುತ್ತಿದ್ದರು ಎಂದರೆ ಸರಿ. ನಾನು ಶವಗಳನ್ನು ನೋಡಿದಾಗ, ಕಡಿದ ಗಾಯಗಳಿಂದ ಸ್ವಲ್ಪ-ಸ್ವಲ್ಪ ರಕ್ತ ಜಿನುಗುತ್ತಿತ್ತು. ಪೊಲೀಸರು ಯಾವುದೇ ಶವ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಕದ್ರಾ ಪೊಲೀಸ್ ಠಾಣೆಗೆ ಹೋದಾಗ, ಪೊಲೀಸರು ಆರೋಪಿಯನ್ನು ಕರೆದುಕೊಂಡು ಬಂದಿದ್ದು, ಅಲ್ಲಿ ನಾನು ಆರೋಪಿಯನ್ನು ನೋಡಿರುತ್ತೇನೆ ಹಾಗೂ ಆತನೇ ವೇಲು ಹಾಗೂ ಆತನ ಮಕ್ಕಳನ್ನು ಕೊಲೆ ಮಾಡಿರುತ್ತಾನೆ ಹಾಗೂ ಜಾನಕಿಯನ್ನು ಕತ್ತಿಯಿಂದ ಕಡಿದಿರುತ್ತಾನೆ ಎಂದು ವಿಷಯ ತಿಳಿದು ಬಂತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ